ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - 560018.

कर्नाटक-संस्कृत-विश्वविद्यालयः
श्री चामराजेन्द्र संस्कृत महाविद्यालय परिसरः
पम्पमहाकविमार्गः, चामराजपेटे, बेङ्गलूरु - ५६००१८.

# 2022ರ ಫೆಬ್ರವರಿ 14ರಂದು ನಡೆದ ಹಣಕಾಸು ಸಮಿತಿ 41ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಹಣಕಾಸು ಸಮಿತಿ 41ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ದಿನಾಂಕ: 14.02.2022ರ ಸೋಮವಾರ ಮಧ್ಯಾಹ್ನ 3.00 ಗಂಟೆಗೆ ನಡೆಯಿತು.

ಈ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳು:

1. ಪ್ರೊ. ಕೆ.ಇ. ದೇವನಾಥನ್, ಕುಲಪತಿಗಳು — ಅಧ್ಯಕ್ಷರು
2. ಶ್ರೀ ವೆಂಕಟೇಶಯ್ಯ ಎಂ.ಜಿ., ಉಪಕಾರ್ಯದರ್ಶಿಗಳು ಉನ್ನತ ಶಿಕ್ಷಣ (ತಾಂತ್ರಿಕ ಮತ್ತು ಯೋಜನೆ) — ಸದಸ್ಯರು
3. ಶ್ರೀಮತಿ ಉಮಾ ಕೆ., ಉಪಕಾರ್ಯದರ್ಶಿಗಳು ಹಣಕಾಸು ಇಲಾಖೆ, ಕರ್ನಾಟಕ ಸರ್ಕಾರ — ಸದಸ್ಯರು
4. ಪ್ರೊ. ವಿ. ಗಿರೀಶ್‌ಚಂದ್ರ, ಕುಲಸಚಿವರು ಮತ್ತು ಡೀನ್, ಕ.ಸಂ.ವಿ. — ಸದಸ್ಯರು
5. ಶ್ರೀ ಎಸ್. ಕುಮಾರ, ಹಣಕಾಸು ಅಧಿಕಾರಿಗಳು, ಕ.ಸಂ.ವಿ. — ಸದಸ್ಯ ಕಾರ್ಯದರ್ಶಿ

ಗೈರುಹಾಜರಾದ ಸದಸ್ಯರು:

1. ಡಾ. ಬಿ. ಶೈಲಶ್ರೀ, ಸಿಂಡಿಕೇಟ್ ಸದಸ್ಯರು, ಕ.ಸಂ.ವಿ. — ಸದಸ್ಯರು

ಹಾಜರಿದ್ದ ಸದಸ್ಯರುಗಳನ್ನು ಅಧ್ಯಕ್ಷರ ಅಪ್ಪಣೆಯ ಮೇರೆಗೆ ಸ್ವಾಗತಿಸುತ್ತಾ, ಈ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

| | |
|---|---|
| ವಿಷಯ 1 | 40ನೇ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗೆಗೆ. |
| ಟಿಪ್ಪಣಿ | ದಿನಾಂಕ: 04.10.2021ರಂದು ನಡೆದ 40ನೇ ಹಣಕಾಸು ಸಮಿತಿ ಸಭೆಯ ನಡಾವಳಿಯನ್ನು ಸಭೆಯ ಮುಂದೆ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | ಅನುಮೋದಿಸಿತು. |
| ವಿಷಯ 2 | 40ನೇ ಸಭೆಯ ನಡಾವಳಿಯಂತೆ ಅನುಪಾಲನಾ ವರದಿಯನ್ನು ಅನುಮೋದಿಸುವ ಬಗೆಗೆ. |
| ಟಿಪ್ಪಣಿ | ದಿನಾಂಕ: 04.10.2021 ರಂದು ನಡೆದ 40ನೇ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಕ್ರಮವಹಿಸಲಾಗಿದ್ದು, ಅದರ ಅನುಪಾಲನಾ ವರದಿಯನ್ನು ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | ಅನುಮೋದಿಸಿತು. |
| ವಿಷಯ 3 | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2021-22ನೇ ಸಾಲಿನ ಅಕ್ಟೋಬರ್-ಡಿಸೆಂಬರ್ 2021, ಮೂರನೇ ತ್ರೈಮಾಸಿಕ ಜಮಾ-ಖರ್ಚನ್ನು ಅನುಮೋದಿಸುವ ಬಗೆಗೆ. |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2021-2022ನೇ ಸಾಲಿನ ಮೂರನೇ ತ್ರೈಮಾಸಿಕದ (ಅಕ್ಟೋಬರ್-ಡಿಸೆಂಬರ್) ಆದಾಯ-ವೆಚ್ಚಗಳನ್ನು ಸಿದ್ಧಪಡಿಸಿದ್ದು, ಸಮಿತಿಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | ಜಮಾ-ಖರ್ಚನ್ನು ಅನುಮೋದಿಸಿತು. |
| ವಿಷಯ 4 | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2020-21ನೇ ಸಾಲಿನ ವಾರ್ಷಿಕ ಲೆಕ್ಕಪತ್ರವನ್ನು ಅನುಮೋದಿಸುವ ಬಗೆಗೆ. |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ತನ್ನ ಹಣಕಾಸಿನ ವಹಿವಾಟನ್ನು Tally ತಂತ್ರಾಂಶದಲ್ಲಿ ನಮೂದಿಸಲಾಗುತ್ತಿದೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಹಣಕಾಸಿನ ವ್ಯವಹಾರಗಳನ್ನು ನಿರ್ವಹಿಸಲು |

| | |
|---|---|
| | M/S. D.N. Joshi & Co. ರವರು ನಿರ್ವಹಿಸುತ್ತಿದ್ದು, ಸದರಿಯವರು 2020-21ನೇ ಸಾಲಿನ ವಾ... ಲೆಕ್ಕಪತ್ರಗಳನ್ನು ಸಿದ್ಧಪಡಿಸಿದ್ದು, ವಿಶ್ವವಿದ್ಯಾಲಯಕ್ಕೆ ಸಲ್ಲಿಕೆಯಾಗಿದೆ. ಸದರಿ ಲೆಕ್ಕಪತ್ರಗಳನ್ನು ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | ವಾರ್ಷಿಕ ಲೆಕ್ಕಪತ್ರವನ್ನು ಅಂಗೀಕರಿಸಿತು ಹಾಗೂ ಲೆಕ್ಕಪರಿಶೋಧನೆಗಾಗಿ ರಾಜ್ಯ ಲೆಕ್ಕಪತ್ರ ಇಲಾಖೆಗೆ ಸಲ್ಲಿಸಲು ಶಿಫಾರಸ್ಸು ಮಾಡಿತು. |
| ವಿಷಯ 5 | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ರಚನೆಗೊಳ್ಳುವ ಸಮಿತಿ/ಉಪಸಮಿತಿ/ಸಭೆಗಳಿಗೆ ಹಾಜರಾಗುವ ಸದಸ್ಯರುಗಳಿಗೆ ಸಭಾಭತ್ಯೆಯನ್ನು ರೂ. 2,000/-ಗಳಿಗೆ ಹೆಚ್ಚಿಸಿರುವುದನ್ನು ಸ್ಥಿರೀಕರಿಸುವ ಬಗೆಗೆ. |
| ಟಿಪ್ಪಣಿ | ಕ.ಸಂ.ವಿ.ಯಲ್ಲಿ ವಿವಿಧ ಉದ್ದೇಶಗಳಿಗಾಗಿ ವಿವಿಧ ಸಮಿತಿಗಳಿದ್ದು, ಈ ಸಮಿತಿಗಳು ಅವಶ್ಯಕತಾನುಸಾರ ಸಭೆ ಸೇರಲಿದ್ದು, ಈ ಸಮಿತಿಯ ಸಭೆಯಲ್ಲಿ ಭಾಗವಹಿಸುವ ಸದಸ್ಯರಿಗೆ ಸಭಾಭತ್ಯೆ ಮತ್ತು ಪ್ರಯಾಣಭತ್ಯೆಯನ್ನು ಪಾವತಿಸಲಾಗುತ್ತಾ ಬರುತ್ತಿದೆ. ಸರ್ಕಾರದ ಆದೇಶ ಸಂಖ್ಯೆ: ಸಾ.ಎ.ಇ 09 ಎಆರ್‌ಯು 2019, ದಿನಾಂಕ: 30.01.2020 ರಂತೆ ಇಂತಹ ಸಮಿತಿಗಳ ಸಭೆಯಲ್ಲಿ ಭಾಗವಹಿಸುವ ಸದಸ್ಯರಿಗೆ ಸಭಾಭತ್ಯೆಯನ್ನು ರೂ. 1,000/-ದಿಂದ ರೂ. 2,000/-ಗಳಿಗೆ ಹೆಚ್ಚಿಸಿ ಆದೇಶ ಹೊರಡಿಸಿದೆ. ಈ ಆದೇಶದಂತೆ ಉತ್ತರಾನುಮೋದನೆಯ ನಿರೀಕ್ಷೆ ಮೇರೆಗೆ ಸರ್ಕಾರದ ಆದೇಶದಂತೆ ಜಾರಿಗೆ ತರಲಾಗಿದೆ. ಸದರಿ ಅಂಶವನ್ನು ಸ್ಥಿರೀಕರಣಕ್ಕಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | ಸ್ಥಿರೀಕರಿಸಿತು. ಆರ್ಥಿಕ ಇಲಾಖೆಯ ಮಾರ್ಗಸೂಚಿಗಳನ್ನು ಅಳವಡಿಸಿಕೊಳಲು ಸೂಚಿಸಿತು. |
| ವಿಷಯ 6 | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅನುದಾನಿತ ಸಂಸ್ಕೃತ ಕಾಲೇಜುಗಳ ಸಿಬ್ಬಂದಿಗಳ ವೇತನವನ್ನು HRMS ಮೂಲಕ ಸೆಳೆಯಲು Mapping ಮಾಡಿಸಲು ಹೊಸ ಬ್ಯಾಂಕ್ ಖಾತೆಯನ್ನು ತೆರೆದಿದ್ದು, ಸ್ಥಿರೀಕರಿಸುವ ಬಗೆಗೆ. |
| ಟಿಪ್ಪಣಿ | ಕ.ಸಂ.ವಿ.ಯ ಅನುದಾನಿತ ಸಂಸ್ಕೃತ ಕಾಲೇಜುಗಳು ಹಾಗೂ ಪಾಠಶಾಲೆಗಳ ಸಿಬ್ಬಂದಿಗಳ ವೇತನ ಬಾಬ್ತು ಒಂದೇ ಖಾತೆಯಲ್ಲಿ Flow ಆಗುತ್ತಿತ್ತು. ಆದರೆ ನವೆಂಬರ್-2021ರಿಂದ ವೇತನವನ್ನು HRMS ಮೂಲಕ ಸೆಳೆಯಲು ಆದೇಶವಾಗಿರುವುದರಿಂದ ಹಾಗೂ HRMS ಮೂಲಕವೇ ಬಿಡುಗಡೆಗೊಳ್ಳುತ್ತಿರುವುದರಿಂದ 'JD, Treasury, K-2'ಗಳಲ್ಲಿ ಕಾಲೇಜು ಸಿಬ್ಬಂದಿಗಳ ವೇತನಕ್ಕೆ ಬೇರೆ ಖಾತೆ ಸಂಖ್ಯೆ, ಪಾಠಶಾಲೆ ಸಿಬ್ಬಂದಿಗಳ ವೇತನಕ್ಕೆ ಬೇರೆ ಖಾತೆ ಸಂಖ್ಯೆ Mapping ಮಾಡಿಸಲು ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆಯಿಂದ ನಿರ್ದೇಶಿತವಾಗಿತ್ತು. ಆದ್ದರಿಂದ ಹಾಲಿ ಇರುವ Block Grant A/C No. 64140220134ನ್ನು ಪಾಠಶಾಲೆಗಳ ವೇತನಕ್ಕೆ Mapping ಮಾಡಿಸಲಾಗಿದೆ. ಕಾಲೇಜು ಸಿಬ್ಬಂದಿಗಳ ವೇತನಕ್ಕೆ SBI ಚಾಮರಾಜಪೇಟೆ ಶಾಖೆಯಲ್ಲಿ ಹೊಸದಾಗಿ A/C No. 40704947828ನ್ನು ರೂ. 10,000/- ಪ್ರಾರಂಭಿಕ ಠೇವಣಿ ಮಾಡಿಸಿ ಖಾತೆ ತೆರೆಯಲಾಗಿದೆ. ಈ ವಿಷಯವನ್ನು ಸಭೆಯ ಅನುಮೋದನೆಗಾಗಿ ಮತ್ತು ಸ್ಥಿರೀಕರಣಕ್ಕಾಗಿ ಮಂಡಿಸಿದೆ. |
| ನಿರ್ಣಯ | ಸಭೆಯು ಸ್ಥಿರೀಕರಿಸಿತು. |
| ವಿಷಯ 7 | ಗೋವಿಂದಯ್ಯ ಪುಟ್ಟತಾಯಮ್ಮ ಮತ್ತು ಸೊಸೆ ಎಲ್. ಜಯಲಕ್ಷ್ಮಮ್ಮ'ನವರ ಸ್ಮರಣಾರ್ಥ, ಯೋಗ-ಪಿ.ಜಿ. ಡಿಪ್ಲೋಮಾ ಕೋರ್ಸಿಗೆ ಚಿನ್ನದ ಪದಕಗಳನ್ನು ನೀಡಲು ದತ್ತಿನಿಧಿ ಖಾತೆ ತೆರೆಯುವ ಬಗೆಗೆ. |
| ಟಿಪ್ಪಣಿ | ಶ್ರೀ ಜಿ. ಕೃಷ್ಣಪ್ಪ ಕೆ.ಜಿ., ನಿವೃತ್ತ ವಿಜ್ಞಾನಿ, ಅಕ್ಷತಾ ಪ್ರಕಾಶನ, ಬೆಂಗಳೂರು -ಇವರು ದಿನಾಂಕ: 19.11.2021ರಂದು ಅರ್ಜಿ ನೀಡಿ, ಯೋಗ-ಪಿ.ಜಿ. ಡಿಪ್ಲೋಮ ಕೋರ್ಸಿನಲ್ಲಿ ಅತಿಹೆಚ್ಚು ಅಂಕ ಪಡೆದ ಒಬ್ಬ ವಿದ್ಯಾರ್ಥಿ ಮತ್ತು ಒಬ್ಬ ವಿದ್ಯಾರ್ಥಿನಿಗೆ 'ಗೋವಿಂದಯ್ಯ ಪುಟ್ಟತಾಯಮ್ಮ ಮತ್ತು ಅವರ ಸೊಸೆ ಎಲ್. ಜಯಲಕ್ಷ್ಮಮ್ಮ'ನವರ ಸ್ಮರಣಾರ್ಥ ಚಿನ್ನದ ಪದಕಗಳನ್ನು ನೀಡುವಂತೆ ಕೋರಿ ರೂ. 5,20,000/-ಗಳನ್ನು ವಿಶ್ವವಿದ್ಯಾಲಯಕ್ಕೆ ನೀಡಿರುತ್ತಾರೆ. 2020-21ನೇ ಸಾಲಿಗೆ ರೂ. 20,000/-ಗಳಲ್ಲಿ ಹಾಗೂ ರೂ. 5,00,000/-ಗಳನ್ನು ದತ್ತಿನಿಧಿ FD ಮಾಡಿ, ಇದರ ಮೇಲೆ ಸ್ವೀಕೃತವಾಗುವ ಬಡ್ಡಿಯಿಂದ ಚಿನ್ನದ ಪದಕಗಳನ್ನು ನೀಡಬೇಕಾಗಿದೆ. ಈ ವಿಷಯವನ್ನು ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | ಸಭೆಯು ಅನುಮೋದಿಸಿತು. |
| ವಿಷಯ 8 | ಹಣಕಾಸು ಅಧಿಕಾರಿಗಳ ಪ್ರಭಾರಭತ್ಯೆ ನೀಡುವ ಬಗೆಗೆ. |
| ಟಿಪ್ಪಣಿ | ಕಸಂವಿಯ ಆದೇಶ ಸಂಖ್ಯೆ: ಕಸಂವಿ/ಹ.ಅ.ನೇ/13/2019-20, ದಿನಾಂಕ: 04.08.2021ರಂತೆ ಶ್ರೀ ಕುಮಾರ ಎಸ್., ಕುಲಸಚಿವರು (ಆಡಳಿತ), ಸಂಸ್ಕೃತ ಸಂಶೋಧನ ಸಂಸತ್, ಮೇಲುಕೋಟೆ -ಇವರನ್ನು ಸರ್ಕಾರದ |

| | |
|---|---|
| | ನಿರ್ದೇಶನದಂತೆ ಕಸಂವಿಯ ಹಣಕಾಸು ಅಧಿಕಾರಿಗಳ ಹುದ್ದೆಯಲ್ಲಿ ಅಧಿಕ ಪ್ರಭಾರದಲ್ಲಿರಿಸಲಾಗಿದೆ. ಹಾಗಾಗಿ ಇವರಿಗೆ ನಿಯಮನುಸಾರ ಪ್ರಭಾರ ಭತ್ಯೆ ನೀಡಬೇಕಾಗಿದೆ. ಆದರೆ, ನವೆಂಬರ್–2021ರಿಂದ ವೇತನವು HRMS ಮೂಲಕ ಬಿಡುಗಡೆಯಾಗುತ್ತಿದೆ ಹಾಗೂ ಇವರ ವೇತನವು ಮೇಲುಕೋಟೆಯ ಸಂಸ್ಕೃತ ಸಂಶೋಧನ ಸಂಸತ್‌ನ ಲೆಕ್ಕಶೀರ್ಷಿಕೆಯಲ್ಲಿ HRMS ಮೂಲಕ ಪಾವತಿಯಾಗುತ್ತಿದೆ. ಇವರಿಗೆ ಸರ್ಕಾರದ ನಿಯಮಾನುಸಾರ ಪ್ರಭಾರಭತ್ಯೆ ನೀಡಲು ಕಸಂವಿ HRMS ಮೂಲಕ Entry ಮಾಡಲು ಅವಕಾಶವಿರದ ಕಾರಣ ಇವರ ಪ್ರಭಾರ ಭತ್ಯೆ ಬಿಡುಗಡೆಯ ಬಗೆಗೆ ಹಣಕಾಸು ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | ಸರ್ಕಾರದ ಕಾಲಕಾಲದ ಆದೇಶಗಳನ್ವಯ ಪಾವತಿಸಲು ಸೂಚಿಸಿತು. HRMS ಮೂಲಕ ವೇತನ ಪಾವತಿಯಾಗುತ್ತಿರುವುದರಿಂದ ಮಾರ್ಚ್ 2022ರ ವರೆಗೆ ವಿಶ್ವವಿದ್ಯಾಲಯದಿಂದಲೂ ಹಾಗೂ ಏಪ್ರಿಲ್ 2022ರಿಂದ ಮೂಲಸ್ಥಾನ ಸಂಸ್ಕೃತ ಸಂಶೋಧನ ಸಂಸತ್, ಮೇಲುಕೋಟೆ –ಇಲ್ಲಿಂದ HRMS ಮೂಲಕ ಪಾವತಿಸಲು ಶಿಫಾರಸ್ಸು ಮಾಡಿತು. |
| ವಿಷಯ 9 | ಸಂಸ್ಕೃತ ಸಂಶೋಧನ ಕೇಂದ್ರದ ನಿರ್ಮಾಣದ ಬಗೆಗೆ. |
| ಟಿಪ್ಪಣಿ | ದಿನಾಂಕ: 01.06.2017 ರಂದು ನಡೆದ ಪ್ರಶಾಸನ ಸಮಿತಿ ಸಭೆಯ ನಿರ್ಣಯದಂತೆ ಮೈಸೂರಿನ ಮಹಾರಾಜ ಸಂಸ್ಕೃತ ಕಾಲೇಜಿನ ಆವರಣದಲ್ಲಿ ಸಂಸ್ಕೃತ ಸಂಶೋಧನಾ ಕೇಂದ್ರವನ್ನು ನಿರ್ಮಿಸಲು ರೂ. 1,10,00,000/– ವೆಚ್ಚದಲ್ಲಿ ಯೋಜಿಸಲಾಗಿರುತ್ತದೆ. ಈ ನಿರ್ಮಾಣ ಕಾರ್ಯಕ್ಕಾಗಿ ಮಹಾರಾಜ ಸಂಸ್ಕೃತ ಕಾಲೇಜಿನ ಅಭಿವೃದ್ಧಿ ಕಾರ್ಯಗಳಿಗಾಗಿ 'ಲೋಕೋಪಯೋಗಿ ಇಲಾಖೆ, ಮೈಸೂರು' –ಇಲ್ಲಿ ಲಭ್ಯವಿದ್ದ ಅನುದಾನ ರೂ. 43,00,000/–ಗಳನ್ನು ಬಳಸಿಕೊಳ್ಳಲಾಗುತ್ತಿದ್ದು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ರೂ. 25,00,000/– ಗಳನ್ನು ಲೋಕೋಪಯೋಗಿ ಇಲಾಖೆ, ಮೈಸೂರು–ಇವರಿಗೆ ಈಗಾಗಲೇ ಪಾವತಿಸಿದೆ.<br>ಸರ್ಕಾರದ ಆದೇಶ ಸಂಖ್ಯೆ: ಇಡಿ 342 ಯುಎನ್‌ಇ 2020, ದಿನಾಂಕ: 31.03.2021 ರಂತೆ ಸದರಿ ಕಾಲೇಜಿನ ಚರಾಸ್ತಿ ಮತ್ತು ಸ್ಥಿರಾಸ್ತಿಗಳೊಂದಿಗೆ ಸದರಿ ಕಾಲೇಜನ್ನು, ಕಾಲೇಜು ಶಿಕ್ಷಣ ಇಲಾಖೆಗೆ ವರ್ಗಾಯಿಸಲಾಗಿರುತ್ತದೆ. ಹಾಗಾಗಿ ಮುಂದಿನ ಸೂಕ್ತ ಕ್ರಮಕ್ಕಾಗಿ ಈ ವಿಷಯವನ್ನು ಹಣಕಾಸು ಸಮಿತಿಯ ನಿರ್ಣಯಕ್ಕೆ ಮಂಡಿಸಿದೆ. |
| ನಿರ್ಣಯ | ಈ ವಿಷಯ ಕುರಿತು ಪೂರ್ಣ ವಿವರಗಳೊಂದಿಗೆ ವಾಸ್ತವಾಂಶಗಳೊಡನೆ ಸರ್ಕಾರಕ್ಕೆ ಪತ್ರ ಬರೆದು ಸರ್ಕಾರದ ನಿರ್ದೇಶನದಂತೆ ಕ್ರಮವಹಿಸಲು ಸಮಿತಿಯು ತೀರ್ಮಾನಿಸಿತು. |
| ವಿಷಯ 10 | ಯೋಗ ಸಭಾಂಗಣ ಮತ್ತು ಜ್ಯೋತಿಷ್ಯ ಪ್ರದರ್ಶಿನಿ ಮಂಟಪಗಳನ್ನು ನಿರ್ಮಿಸುವ ಬಗೆಗೆ. |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವ್ಯಾಕರಣ ವಿಭಾಗದ ಮುಖ್ಯಸ್ಥರಾದ ಪ್ರೊ. ಶಿವಾನಿ ವಿ. ಅವರು, ದಿನಾಂಕ: 19.01.2022ರಂದು ಅರ್ಜಿ ನೀಡಿ ಯೋಗ ಮತ್ತು ಜ್ಯೋತಿಷ್ಯ ಕೋರ್ಸ್‌ಗಳಿಂದ ಹೆಚ್ಚಿನ ಆದಾಯ ಬಂದಿದ್ದು, ಯೋಗಾಭ್ಯಾಸಕ್ಕಾಗಿ ಯೋಗ ಸಭಾಂಗಣ ಹಾಗೂ ಜ್ಯೋತಿಷ್ಯ ಪ್ರದರ್ಶಿನಿಗಾಗಿ ಮಂಟಪಗಳನ್ನು ಹಾಗೂ ಕಂಪ್ಯೂಟರ್ ಲ್ಯಾಬ್‌ಗಳನ್ನು ನಿರ್ಮಿಸಿಕೊಡಬೇಕೆಂದು ಕೋರಿರುತ್ತಾರೆ.<br>ಸರ್ಕಾರದ ಆದೇಶ ಸಂಖ್ಯೆ: ಇಡಿ 342 ಯುಎನ್‌ಇ 2020, ದಿನಾಂಕ: 31.03.2021 ರಂತೆ ಸರ್ಕಾರಿ ಸಂಸ್ಕೃತ ಕಾಲೇಜುಗಳನ್ನು ಸದರಿ ಕಾಲೇಜುಗಳ ಚರಾಸ್ತಿ ಮತ್ತು ಸ್ಥಿರಾಸ್ತಿಗಳೊಂದಿಗೆ ಕಾಲೇಜು ಶಿಕ್ಷಣ ಇಲಾಖೆಗೆ ವರ್ಗಾಯಿಸಲಾಗಿರುತ್ತದೆ. ಹಾಗಾಗಿ ಈ ವಿಷಯವನ್ನು ಹಣಕಾಸು ಸಮಿತಿಯ ನಿರ್ಣಯಕ್ಕೆ ಮಂಡಿಸಿದೆ. |
| ನಿರ್ಣಯ | **ಸರ್ಕಾರದ ಆದೇಶ ಸಂಖ್ಯೆ: ಇಡಿ 342 ಯುಎನ್‌ಇ 2020, ದಿನಾಂಕ: 31.03.2021 ರಂತೆ ಸರ್ಕಾರಿ ಸಂಸ್ಕೃತ ಕಾಲೇಜುಗಳನ್ನು ಸದರಿ ಕಾಲೇಜುಗಳ ಚರಾಸ್ತಿ ಮತ್ತು ಸ್ಥಿರಾಸ್ತಿಗಳೊಂದಿಗೆ ಕಾಲೇಜು ಶಿಕ್ಷಣ ಇಲಾಖೆಗೆ ವರ್ಗಾಯಿಸಿರುವುದರಿಂದ, ವಿಶ್ವವಿದ್ಯಾಲಯದ ಪ್ರಸ್ತಾವಿತ ಪರಿಸರದಲ್ಲಿ ಸ್ಥಳಾವಕಾಶ ಇದ್ದಲ್ಲಿ ಕ್ರಮವಹಿಸಲು ಅಥವಾ ಹಾಲಿ ಪರಿಸರದ ವ್ಯಾಪ್ತಿಯಲ್ಲಿ ತಾತ್ಕಾಲಿಕವಾಗಿ ಬಾಡಿಗೆ ಅಥವಾ ಭೋಗ್ಯದ ಆಧಾರದ ಮೇಲೆ ವ್ಯವಸ್ಥೆ ಕಲ್ಪಿಸಿಕೊಳ್ಳುವಂತೆ ಸಭೆಯು ತೀರ್ಮಾನಿಸಿತು.** |
| ವಿಷಯ 11 | ತಿಪ್ಪಸಂದ್ರದಲ್ಲಿ ಹೊಸದಾಗಿ ನಿರ್ಮಾಣಗೊಳ್ಳುತ್ತಿರುವ ಕಾಮಗಾರಿ ಮತ್ತು ಮೂಲಭೂತ ಸೌಲಭ್ಯ ನಿರ್ವಹಣೆಗಾಗಿ Conveyance Charges ನಿಗದಿಪಡಿಸುವ ಬಗೆಗೆ. |
| ಟಿಪ್ಪಣಿ | ತಿಪ್ಪಸಂದ್ರದಲ್ಲಿ ಹೊಸದಾಗಿ ನಿರ್ಮಾಣಗೊಳ್ಳುತ್ತಿರುವ ಕಾಮಗಾರಿ ಮತ್ತು ಮೂಲಭೂತ ಸೌಲಭ್ಯವನ್ನು ಅಭಿವೃದ್ಧಿಪಡಿಸುವ ಮತ್ತು ಕಾಮಗಾರಿ ಕೆಲಸಗಳ ಉಸ್ತುವಾರಿ ನೋಡಿಕೊಳ್ಳಲು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪರವಾಗಿ ಡಾ. ತಿಮ್ಮಣ್ಣ ಆರ್., ಯೋಜನಾ ಸಹಾಯಕರು ಹಾಗೂ ಶ್ರೀ ರಾಜಣ್ಣ, |

| | |
|---|---|
| | ಸಹಶಿಕ್ಷಕರು ಇವರನ್ನು ನಿಯೋಜಿಸಲಾಗಿದೆ. ಸದರಿಯವರುಗಳು ಕಾಲಕಾಲದಲ್ಲಿ ವಿಶ್ವವಿದ್ಯಾಲಯದ ಸೂ[illegible] ನಿರ್ದೇಶದ ಮೇರೆಗೆ ಕಾಮಗಾರಿ/ಅಭಿವೃದ್ಧಿಕಾರ್ಯಗಳ ಪರಿವೀಕ್ಷಣೆ ಮಾಡಿ ವರದಿ ಸಲ್ಲಿಸಬೇಕಿದೆ. ಈ ಹಿನ್ನೆಲೆಯಲ್ಲಿ ಸದರಿಯವರುಗಳಿಗೆ ನಿಯಮಾನುಸಾರ Conveyance Charges ನಿಗದಿಪಡಿಸುವ ಸಂಬಂಧ ಸಮಿತಿಯ ಮುಂದೆ ಮಂಡಿಸಿದೆ. |
| ನಿರ್ಣಯ | ಕಾಮಗಾರಿಗಳ ಉಸ್ತುವಾರಿ ಮತ್ತು ಪರಿವೀಕ್ಷಣೆಗಾಗಿ ನಿಯೋಜಿತಗೊಂಡ ಸಿಬ್ಬಂದಿಗಳು ಮಾಸಿಕವಾಗಿ 10 ರಿಂದ 12 ಬಾರಿ ಸದರಿ ಸ್ಥಳಕ್ಕೆ ಭೇಟಿ ನೀಡುವ ಅವಶ್ಯಕತೆಯಿದ್ದು, ಇವರಿಗೆ ಪ್ರಯಾಣಭತ್ಯೆ/ವಾಹನ ಸೌಲಭ್ಯ ಕಲ್ಪಿಸಬೇಕಾಗಿದೆ. ಕೇಂದ್ರ ಸ್ಥಾನದಿಂದ ಸುಮಾರು 70 ಕಿ.ಮೀ. ದೂರವಿರುವ ಕಾಮಗಾರಿ ಸ್ಥಳಕ್ಕೆ ಮತ್ತು ತಾಲ್ಲೂಕು ಇಲಾಖೆಗಳ ಕೇಂದ್ರವಾದ ಮಾಗಡಿ ಪಟ್ಟಣಕ್ಕೆ ಪ್ರಯಾಣಿಸಲು ಅನುಕೂಲವಾಗುವಂತೆ ಮಾಸಿಕ ರೂ. 2500/- ಗಳನ್ನು ನಿಗದಿಪಡಿಸುವಂತೆ ಮತ್ತು ವಿಶೇಷ ಸಂದರ್ಭಗಳಲ್ಲಿ ಮಾನ್ಯ ಕುಲಪತಿಗಳ ಆಜ್ಞಾನುಸಾರ ವಾಹನ ಸೌಲಭ್ಯ ಕಲ್ಪಿಸುವಂತೆ ಸಭೆಯು ತೀರ್ಮಾನಿಸಿತು. ಈ ವೆಚ್ಚವನ್ನು ವಿಶ್ವವಿದ್ಯಾಲಯದ ಆಂತರಿಕ ಮೂಲದಿಂದ ಭರಿಸಲು ಸಭೆಯು ಒಪ್ಪಿತು. |

ಮೇಲ್ಕಂಡ ವಿಷಯಗಳನ್ನು ಹೊರತು ಪಡಿಸಿ ಇತರೆ ವಿಷಯಗಳು ಚರ್ಚೆಗೆ ಬಾದರ ಕಾರಣ ಮಾನ್ಯ ಅಧ್ಯಕ್ಷರ ಅಪ್ಪಣೆಯೊಂದಿಗೆ ಹಾಜರಿದ್ದ ಎಲ್ಲಾ ಸದಸ್ಯರಗಳಿಗೂ ವಂದಿಸಿ ಸಭೆಯು ಮುಕ್ತಾಯಗೊಂಡಿತು.

ಹಣಕಾಸು ಅಧಿಕಾರಿಗಳು
ಸದಸ್ಯ ಕಾರ್ಯದರ್ಶಿ

ಕುಲಪತಿಗಳು
ಅಧ್ಯಕ್ಷರು